**ಸಾಕ್ಷಿಗೆ ದಿನಾಂಕ 07-02-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ VCMP ವಕೀಲರಿಂದ</u>**

ಮೃತ ಸಂತೋಷ ನನ್ನ ಮಗ. ನನ್ನ ಮಗ ಬೆಂಗಳೂರಿನಲ್ಲಿ ಎಂಬೋಲಾಜಿ ಕಂಪನಿಯಲ್ಲಿ 4 ವರ್ಷಗಳಿಂದ Software Engineer ಅಂತಾ ಕೆಲಸ ಮಾಡುತ್ತಿದ್ದ. ನನ್ನ ಮಗ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲಾತಿ ಸಲ್ಲಿಸಿರುತ್ತೇನೆ. ನನ್ನ ಮಗ ಸದರಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವ ದಾಖಲಾತಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ನೇಮಕಾತಿ ಪತ್ರ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

ನಿಪಿ-15 ದಾಖಲಾತಿಯನ್ನು ಹೊರತುಪಡಿಸಿ ನನ್ನ ಮಗನ ಸಂಬಳ ಪಡೆಯುತ್ತಿದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ.

ನನ್ನ ಮಗನಿಗೆ ಆ ಸಮಯದಲ್ಲಿ ವರ್ಷಕ್ಕೆ 5 ಲಕ್ಷ ಪ್ಯಾಕೇಜ್ ಸಂಬಳ ಇತ್ತು. ನನ್ನ ಮಗನ ಸಂಬಳ ನನ್ನ ಮಗನ ಬ್ಯಾಂಕ್ ಖಾತೆಗೆ ಸಂದಾಯವಾಗುತ್ತಿತ್ತು. ನಮ್ಮ ಮಗನ ಬ್ಯಾಂಕ್ ಅಕೌಂಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಮಗ ಆದಾಯ ತೆರಿಗೆ ಕಟ್ಟುತ್ತಿರಲಿಲ್ಲ. 2016ವರೆಗೆ ನನ್ನ ಮಗ ಆದಾಯ ತೆರಿಗೆಯನ್ನು ಕಟ್ಟುತ್ತಿರಲಿಲ್ಲ.

ನನ್ನ ಮಗ ಸಂತೋಷ ಕರ್ನಾಟಕ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದ. ಆದರೆ ನನ್ನ ಮಗ ಸಂತೋಷನ ಮರಣಾನಂತರ ನಾವು ಸದರಿ ನಮ್ಮ ಮಗನ ಹೆಸರಿನಲ್ಲಿದ್ದ ಅಕೌಂಟ್ ಮುಚ್ಚಿಸಿ ಬಂದಿರುತ್ತೇವೆ. ಈಗ ಕರ್ನಾಟಕ ಬ್ಯಾಂಕಿನಲ್ಲಿ ನನ್ನ ಮಗನ ಹೆಸರಿನಲ್ಲಿದ್ದ ಖಾತೆಯ ದಾಖಲಾತಿಯನ್ನು ಕೇಳಿದರೆ ನಮಗೆ ಸಿಗುತ್ತದೆ. ನನ್ನ ಮಗನ ಹೆಸರಿಲ್ಲಿದ್ದ ಕರ್ನಾಟಕ ಬ್ಯಾಂಕ್ ಖಾತೆಯ ದಾಖಲಾತಿಯನ್ನು ಹಾಗೂ ಸದರಿ ಖಾತೆಯನ್ನು ಮುಚ್ಚಲು ನೀಡಿದ ಅರ್ಜಿ ದಾಖಲಾತಿಯನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ನವೆಂಬರ್2016ರಲ್ಲಿ ನನ್ನ ಮಗ ಮೃತಪಟ್ಟಿದ್ದು ಅದಾದ ಒಂದು ತಿಂಗಳಿನ ನಂತರ ನನ್ನ ಮಗನ ಹೆಸರಿನಲ್ಲಿದ್ದ ಬ್ಯಾಂಕ್ ಖಾತೆ ಮುಚ್ಚಿ  ಬಂದಿರುತ್ತೇವೆಂದು ನುಡಿಯುತ್ತಾರೆ. ಸಂತ್ಯಾಂಶ ಹೊರಬರುತ್ತದೆ ಅಂತಾ ಸದರಿ ನನ್ನ ಮಗನ ಹೆಸರಿನಲ್ಲಿದ್ದಂತಹ ಬ್ಯಾಂಕ್ ಸ್ಟೇಟಮೆಂಟ್ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮಗನಿಗೆ ವರ್ಷಕ್ಕೆ 3 ಲಕ್ಷ ರೂಪಾಯಿ ಪ್ಯಾಕೇಜ್ ಹಾಗೂ ಪ್ರತಿ ತಿಂಗಳು ರೂ.27500/- ಸಂಬಳ ಇತ್ತು ಅಂತಾ ತೋರಿಸಲು ಯಾವುದೇ ದಾಖಲಾತಿ ಸಲ್ಲಿಸಿಲ್ಲ ಹಾಗೂ ಆತನಿಗೆ ಅಷ್ಟು ಸಂಬಳ ಇತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗ ಸಂತೋಷನಿಗೆ 26 ವರ್ಷ ವಯಸ್ಸಾಗಿತ್ತು. ನನ್ನ ಮಗ ಸಂತೋಷನಿಗೆ 26 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜುರಪಡಿಸಿರುತ್ತೇನೆ. ನನ್ನ ಮಗ ಸಂತೋಷನ ಜನ್ಮ ದಿನಾಂಕ 21-11-1987 ಆಗಿತ್ತು. ನನ್ನ ಮಗನಿಗೆ ಅಪಘಾತದ ಸಮಯದಲ್ಲಿ 30 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದರೂ ಸಹ ಆತನಿಗೆ 26 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ದಿನದಂದು ನನ್ನ ಮಗ ಸಂತೋಷ ಶಬರಿಮಲೆ ಅಯ್ಯಪ್ಪನ ದರ್ಶನ ಪಡೆದು ವಾಪಸ್ ಬರುತ್ತಿದ್ದರು. ನನ್ನ ಮಗ ಆ ದಿನ ಟ್ಯಾಕ್ಸಿ ವಾಹನದಲ್ಲಿ ಬರುತ್ತಿದ್ದರು. ಸದರಿ ಟ್ಯಾಕ್ಸಿ ವಾಹನದಲ್ಲಿ 5 ಜನ ಬರುತ್ತಿದ್ದರು. ಸದರಿ ಟ್ಯಾಕ್ಸಿ ವಾಹನದಲ್ಲಿ ಚಾಲಕನನ್ನು ಹೊರತುಪಡಿಸಿ 5 ಜನ ಬರುತ್ತಿದ್ದರು.

ನನ್ನ ಮಗ ಸಂತೋಷ ಶಬರಿಮಲೆ ಅಯ್ಯಪ್ಪನ ದರ್ಶನ ಪಡೆದು ವಾಪಾಸ್ ಬರುತ್ತಿದ್ದಾಗ ಕೆ.ಜಿ.ಚಾವಡಾ (ತಮಿಳುನಾಡು ಮತ್ತು ಕೇರಳ ಸರಹದ್ದು) ಬಳಿ ಬರುವಾಗ ಬೆಳಿಗ್ಗೆ 5 ಗಂಟೆಗೆ ನನ್ನ ಮಗನ ಕಾರಿನ ಮುಂದೆ ಒಂದು ಲಾರಿ ಹೋಗುತ್ತಿದ್ದು ಆಗ ಸದರಿ ಕಾರಿನ ಚಾಲಕ ಸದರಿ ಲಾರಿ ಪಕ್ಕದಿಂದ ಹೋದಾಗ ಡಿವೈಡರ್ ಗೆ ಡಿಕ್ಕಿಯಾದ ಕಾರಣ ಅಪಘಾತ ಆಗಿರುತ್ತದೆ. ಅಪಘಾತವು ಬೆಳಿಗ್ಗೆ 4-30 ರಿಂದ 5-00 ಗಂಟೆ ಸಮಯದಲ್ಲಿ ಆಗಿರಬಹುದು.

ಅಪಘಾತ ವಿಚಾರವಾಗಿ ದೂರನ್ನು ಸದರಿ ಕಾರಿನಲ್ಲಿದ್ದಂತಹ ನನ್ನ ಮಗನ ಸಹಪಾಟಿಗಳು ನೀಡಿರುತ್ತಾರೆ. ಅಪಘಾತವು ದಿನಾಂಕ 18-11-2016 ರಂದು ಆಗಿರುತ್ತದೆ. ದೂರನ್ನು ಅಪಘಾತದ ದಿನದಂದೇ ನೀಡಲಾಗಿರುತ್ತದೆ. ದೂರನ್ನು ಸಿದ್ದಲಿಂಗಯ್ಯ ಎನ್ನುವವರು ಅಪಘಾತವಾದ 6 ದಿನಗಳ ನಂತರ ಅಂದರೆ 24-11-2016ರಂದು ನೀಡಿರುತ್ತಾರೆಂದರೆ ಸಾಕ್ಷಿ ನನ್ನ ಮಗನನ್ನು ನಾವು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದ್ದು ಆತ 24-11-2016ರಂದು ಮೃತಪಟ್ಟಿದ್ದು ಆ ನಂತರ ಆಸ್ಪತ್ರೆಯವರು ಮಲ್ಲೇಶ್ವರಂನಲ್ಲಿರುವ ಠಾಣೆಯವರಿಗೆ ನನ್ನ ಮಗನ ಮರಣದ ವಿಚಾರವನ್ನು ತಿಳಿಸಿದ್ದು ಆಗ ಮಲ್ಲೇಶ್ವರಂ ಪೊಲೀಸರು ಕೆ.ಜಿ.ಚಾವಡಾ ಪೊಲೀಸರೊಂದಿಗೆ ಮಾತನಾಡಿದ್ದು ಸದರಿ ಕೆ.ಜಿ.ಚಾವಡಾ ಠಾಣೆಯವರು ನಮಗೆ ಶವಪರೀಕ್ಷೆ ಮಾಡಲು ಬೆಂಗಳೂರಿಗೆ ಬರಲು ಆಗಲ್ಲ ನೀವೇ ಮಾಡಿಕೊಳ್ಳಿ ಅಂತಾ ಮಲ್ಲೇಶ್ವರಂ ಪೊಲೀಸರಿಗೆ ಹೇಳಿದ ಕಾರಣ ಮಲ್ಲೇಶ್ವರಂ ಪೊಲೀಸರು ನನ್ನ ಮಗನ ಶವಪರೀಕ್ಷ ಮಾಡಿ ನನ್ನ ಮಗನ ಶವವನ್ನು ನಮಗೆ ನೀಡಿರುತ್ತಾರೆಂದು ನುಡಿಯುತ್ತಾರೆ.

ಅಪಘಾತವು ದಿನಾಂಕ 18-11-2016 ರಂದು ಆಗಿದೆಯೇ ಅಥವಾ ದಿನಾಂಕ 24-11-2016 ರಂದು ಆಗಿದೆಯೇ ಎಂದರೆ ಸಾಕ್ಷಿ ದಿನಾಂಕ 18-11-2016 ರಂದು ಆಗಿದೆ ಎಂದು ನುಡಿಯುತ್ತಾರೆ. FIR ನಲ್ಲಿ ನಾನು ಮೇಲೆ ಹೇಳಿದ ವಿಚಾರ ಹಾಗೂ ವಿಳಂಬವಾದ ಬಗ್ಗೆ ಏನೂ ನಮೂದು ಆಗಿಲ್ಲ ಎಂದರೆ ಸಾಕ್ಷಿ ಅಪಘಾತವಾದ ನನ್ನ ಮಗನನ್ನು ಮೊದಲಿಗೆ ಕೊಯಮತ್ತೂರಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಆ

ನಂತರ ಮಲ್ಲೇಶ್ವರಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿರುತ್ತೇವೆಂದು ನುಡಿಯುತ್ತಾರೆ ಹಾಗೂ ಸದರಿ ವಿಚಾರ official ಹಂತದಲ್ಲಿ ಆಗಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ-1ರ ದಾಖಲಾತಿಯಲ್ಲಿ ಯಾವ ದಿನಾಂಕದಂದು ಹಾಗೂ ಹೇಗೆ ಅಪಘಾತವಾಗಿದೆ ಅಂತಾ ನಮೂದು ಆಗಿಲ್ಲ ಆದರೆ ಮರಣ ಹೊಂದಿರುತ್ತಾರೆಂದು ಮಾತ್ರ ನಮೂದು ಆಗಿದೆ ಎಂದರೆ ನಿಜ. ದಿನಾಂಕ 18-11-2016 ರಂದು ಕಾರ್ ನಂ.ಕೆಎ-03 ಎಡಿ-1635 ರಿಂದ ಯಾವುದೇ ಅಪಘಾತ ಆಗಿರದೇ ಇದ್ದರೂ ಸಹ ಕಾರ್ ಚಾಲಕನ ಅಜಾಗರೂಕತೆ ನಿರ್ಲಕ್ಷತನದಿಂದ ಅಪಘಾತ ಆಗಿದೆ ಎಂದು ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಭಾಷೆ ಬರುವುದಿಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನಿಜ ಇದೆ. ಕಾರ್ ನಂ.ಕೆಎ-03 ಎಡಿ-1635 ರ ವಾಹನದಿಂದ ಯಾವುದೆ ಅಪಘಾತವಾಗಿರದೇ ಇದ್ದರೂ ಸಹ 6 ದಿನ ಸಮಯ ತೆಗೆದುಕೊಂಡು ಪೊಲೀಸರೊಂದಿಗೆ ಶಾಮೀಲಾರಿ ಸದರಿ ಕಾರ್ ವಿರುದ್ಧ ಪ್ರಕರಣ ದಾಖಲಿಸುವಂತೆ ಮಾಡಿರುತ್ತೇವೆಂದರೆ ಸರಿಯಲ್ಲ. ಪೊಲೀಸರು , ನಾವು, ಕಾರ್ ಮಾಲೀಕ ಸೇರಿಕೊಂಡು ಸುಳ್ಳು ದಾಖಲಾತಿಗಳನ್ನು ಸೃಷ್ಠಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿಕೊಂಡಿರುತ್ತೇವೆಂದರೆ ಸರಿಯಲ್ಲ.

ನನ್ನ ಮಗನ ಚಿಕಿತ್ಸೆಗೆ ಸುಮಾರು 8 ಲಕ್ಷ ಖರ್ಚಾಗಿರುತ್ತದೆ. 8 ಲಕ್ಷ ಖರ್ಚಾದ ಬಿಲ್ಲುಗಳನ್ನು ಹಾಜರುಪಡಿಸಿರುತ್ತೀರ ಎಂದರೆ ಸಾಕ್ಷಿ ನನ್ನ ಬಳಿ ಇದ್ದಂತಹ 6 ರಿಂದ 7 ಲಕ್ಷ ಬಿಲ್ಲುಗಳನ್ನು ಸಲ್ಲಿಸಿರುತ್ತೇನೆ. ಸದರಿ ಆಸ್ಪತ್ರೆಗೆ ಬಿಲ್ಲುಗಳನ್ನು ಸೃಷ್ಠಿ ಮಾಡಿ ಪ್ರಕರಣದಲ್ಲಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಿನಾಂಕ 18-11-2016 ರಂದು ನನ್ನ ಮಗನಿಗೆ ಯಾವುದೇ ಅಪಘಾತ ಆಗಿಲ್ಲ ಹಾಗೂ ಸದರಿ ಅಪಘಾತದಲ್ಲಿ ನನ್ನ ಮಗ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ.

ನಾವು ನನ್ನ ಮಗನ ಆದಾಯದ ಮೇಲೆ ಅವಲಂಬಿತವಾಗಿದ್ದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾವು ಕೇಳಿದ ಪರಿಹಾರ ಧನದ ಮೊತ್ತಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳಿರುತ್ತೇವೆಂದರೆ ಸರಿಯಲ್ಲ. ಸುಳ್ಳ ದಾಖಲಾತಿಗಳನ್ನು ಸೃಷ್ಠಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ 2ನೇ ಎದುರುದಾರರ ವಿರುದ್ಧ ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,ಜೇವರ್ಗಿ